ಇ) ಮಾಹಿತಿ ನಮ್ಮಲ್ಲಿಲ್ಲ.

ಈ) ಬೀದರ್ ಜಿಲ್ಲೆಗೆ ಮಾತ್ರ.

ಉ) ಕರ್ನಾಟಕದಲ್ಲಿ ಈಗ ಉಪಯೋಗಿಸಲ್ಪಡುತ್ತಿರುವ ನೀರಿನ ಪ್ರಮಾಣ 4.60 ಟಿ.ಎಂ.ಸಿ.

ಬಚಾವತ್ ತೀರ್ಪಿನಂತೆ 2000ನೇ ಇಸವಿಯೊಳಗೆ ಕಷ್ಣಾ ನದಿಯ ನೀರಿನ ಬಳಕೆ

245 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಚಾವತ್ ತೀರ್ಪಿನಂತೆ 2000ನೇ ಇಸವಿಯೊಳಗೆ ತನ್ನ ಪಾಲಿನ ಕೃಷ್ಣಾ ನದಿಯ ನೀರನ್ನು ಪೂರ್ಣವಾಗಿ ಬಳಸಿಕೊಳ್ಳಲು ರಾಜ್ಯ ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು?*

ಆ) *ಇದುವರೆವಿಗೂ ರಾಜ್ಯ ಸರ್ಕಾರ ಕೃಷ್ಣಾ ನದಿಯಿಂದ ಎಷ್ಟು ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡಿದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯದ ಪಾಲಿನ ನೀರನ್ನು ಬಳಸಲು ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಲಾಗಿದ್ದು, ಅದನ್ನು 2000 ಇಸವಿಯೊಳಗೆ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಲಾಗುತ್ತಿದೆ.

ಆ) ಈಗ ಮುಗಿಸಿರುವ ಯೋಜನೆಗಳಿಂದ ಮತ್ತು ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳಿಂದ ಸುಮಾರು 472ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಬಹುದಾಗಿದೆ.

ಗಡಿ ಪ್ರದೇಶಗಳಲ್ಲಿರುವ ತಾಲ್ಲೂಕುಗಳ ಅಭಿವೃದ್ಧಿ

11 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗಡಿ ಪ್ರದೇಶದಲ್ಲಿರುವ ತಾಲ್ಲೂಕುಗಳ ಅಭಿವೃದ್ಧಿಗಾಗಿ 1990-91-92-93-94-95 ವರ್ಷಗಳಲ್ಲಿ ನಿಗಧಿಪಡಿಸಿರುವ ಹಣದ ಮೊತ್ತವೆಷ್ಟು?*

ಆ) *ಕೆಲವೇ ತಾಲ್ಲೂಕ್‌ಗಳಿಗೆ ಹೆಚ್ಚಿನ ಮೊತ್ತವನ್ನು ಮಂಜೂರು ಮಾಡಿರುವ ಬಗ್ಗೆ ಮುಖ್ಯ ಕಾರಣಗಳೇನು? - ಆ ತಾಲ್ಲೂಕ್ ಗಳ ಹೆಸರು ಮತ್ತು ಮಂಜೂರಾದ ಹಣದ ಮೊತ್ತವೆಷ್ಟು?*

ಇ) *ಹಿಂದಿನ ಬಜೆಟ್ ಅಧಿವೇಶನದಲ್ಲಿ ಮಾಜಿ ಹಣಕಾಸಿನ ಮಂತ್ರಿಗಳು ವರ್ಷಕ್ಕೆ ಒಟ್ಟು ರೂ.15 ಕೋಟಿಗಳು ಮಂಜೂರು ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿರುವ ಪ್ರಯುಕ್ತ ಆ ಆಶ್ವಾಸನೆಯನ್ನು ಉಳಿಸಿಕೊಳ್ಳಲು ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಗೊಳ್ಳುವರೇ?*

ಈ) *ಇಂತಹ ಗಡಿ ಪ್ರದೇಶದ ತಾಲ್ಲೂಕುಗಳೆಷ್ಟು, ಜಿಲ್ಲಾವಾರು ಸಂಖ್ಯೆ ಅವುಗಳ ಕೆಲಸಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1990-91ನೇ ಸಾಲಿನ ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಕ್ಕೆ ರೂ.5 ಕೋಟಿಗಳನ್ನು ಮಂಜೂರು ಮಾಡಲಾಗಿದೆ. 1991-92ನೇ ಸಾಲಿನಿಂದ 1994-95ರ ವರೆಗೆ ಪ್ರತಿ ವರ್ಷಕ್ಕೆ ರೂ.10 ಕೋಟಿಗಳಂತೆ ಹಣವನ್ನು ಒದಗಿಸಲು ಉದ್ದೇಶಿಸಲಾಗಿದೆ.

ಆ) ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕ್ ಮತ್ತು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕುಗಳಲ್ಲಿ 'ನಕ್ಸಲೈಟ್' ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಕಾನೂನು ಮತ್ತು ಶಿಸ್ತು ಪರಿಪಾಲನೆಗಾಗಿ 1990-91ನೇ ಸಾಲಿಗೆ ಗಡಿ ಪ್ರದೇಶ ಅಭಿವೃದ್ಧಿಗಾಗಿ ಒದಗಿಸಲಾದ ಒಟ್ಟು ರೂ. 5 ಕೋಟಿಗಳ ಪೈಕಿ ಚಿಂಚೋಳಿ ತಾಲ್ಲೂಕಿಗೆ ರೂ. 93.5 ಲಕ್ಷಗಳನ್ನು ಮತ್ತು ಪಾವಗಡ ತಾಲ್ಲೂಕಿಗೆ ರೂ.93 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಆರ್ಥಿಕ ಅಡಚಣೆಗಳಿಂದಾಗಿ, ಹೆಚ್ಚುವರಿ ರೂ.10 ಕೋಟಿಗಳನ್ನು ಪಡೆಯಲು ಸಾಧ್ಯವಾಗಿಲ್ಲ.

ಇ) ಹಿಂದಿನ ವಿತ್ತ ಮಂತ್ರಿಗಳು ಈ ಯೋಜನೆಗೆ ಅಯವ್ಯಯದಲ್ಲಿ ಒದಗಿಸಿದ ರೂ.5 ಕೋಟಿಗಳ ಜೊತೆಗೆ ಇನ್ನೂ ರೂ.10 ಕೋಟಿಗಳನ್ನು ಒದಗಿಸುವ ಆಶ್ವಾಸನೆಯನ್ನು ನೀಡಿದ್ದರು. ಇದರಿಂದ ಈ ಯೋಜನೆಗಾಗಿ ಮಾಡಿದ ಅನುದಾನ ರೂ. 15 ಕೋಟಿಗಳಾಗುವುದೆಂದು ಆಶ್ವಾಶಿಸಲಾಗಿತ್ತು.

ಈ) ಗುಲ್ಬರ್ಗಾ ವಿಭಾಗದಲ್ಲಿರುವ ತಾಲ್ಲೂಕುಗಳನ್ನು ಹೊರತು ಪಡಿಸಿ ಒಟ್ಟು 36 ಗಡಿ. ತಾಲ್ಲೂಕುಗಳು ಇರುತ್ತವೆ. ಪ್ರಸಕ್ತ ಸಾಲಿನಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಹಣವನ್ನು ಈ ಕೆಳಕಂಡ 37 ತಾಲ್ಲೂಕುಗಳಿಗೆ (ಚಿಂಚೋಳಿ ಸೇರಿ) ಹಂಚಲಾಗಿದೆ.

ಜಿಲ್ಲೆಯ ಹೆಸರು	ತಾಲ್ಲೂಕುಗಳ ಸಂಖ್ಯೆ
1. ಬೆಂಗಳೂರು (ನಗರ)	1
2. ಬೆಂಗಳೂರು (ಗ್ರಾಮಾಂತರ)	2
3. ಚಿತ್ರದುರ್ಗ	3
4. ಕೋಲಾರ	8
5. ತುಮಕೂರು	3
6. ದಕ್ಷಿಣ ಕನ್ನಡ	4
7. ಕೊಡಗು	2
8. ಮೈಸೂರು	4
9. ಬೆಳಗಾಂ	5
10. ಬಿಜಾಪುರ	2
11. ಉತ್ತರ ಕನ್ನಡ	2
12. ಗುಲ್ಬರ್ಗಾ	1
ಒಟ್ಟು	37

ಈ ತಾಲ್ಲೂಕುಗಳಲ್ಲಿ ಕೈಗೆತ್ತಿಕೊಂಡಿರುವ ಕೆಲಸಗಳ ಸ್ವಭಾವವು ಮುಖ್ಯವಾಗಿ ಈ ಕೆಳಕಂಡ ವಿಭಾಗಗಳ ಅಡಿಯಲ್ಲಿ ಬರುತ್ತದೆ.

1. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಟ್ಟಡಗಳು.
2. ಅಂಗನವಾಡಿ ಕಟ್ಟಡಗಳು.
3. ರಸ್ತೆಗಳು ಮತ್ತು ಸೇತುವೆಗಳು.
4. ನೀರು ಪೂರೈಕೆ ಮತ್ತು ಗ್ರಾಮೀಣ ನೈರ್ಮಲ್ಯ.

5. ಸಾರ್ವಜನಿಕ ಆರೋಗ್ಯ ಕಟ್ಟಡಗಳು.

6. ಸಣ್ಣ ನೀರಾವರಿ.

7. ಪಶು ಸಂಗೋಪನೆ.

ರಾಜ್ಯದಿಂದ ಗ್ರಾನೈಟ್ ಕಲ್ಲುಗಳನ್ನು ರಫ್ತು

39 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಗ್ರಾನೈಟ್ ಕಲ್ಲನ್ನು ರಫ್ತು ಮಾಡುವ ಬಗ್ಗೆ ಸರ್ಕಾರದವರು ಕೊಟ್ಟಿರುವ ಪರವಾನಿಗೆಗಳೆಷ್ಟು?*

(1983ರಿಂದ 1989 ಡಿಸೆಂಬರ್ ಕೊನೆಯ ವರೆವಿಗೆ ಮತ್ತು 1-1-1990ರಿಂದ 15-10-90ನೇಯವರಿಗೆ ಮತ್ತು 20ನೇ ಅಕ್ಟೋಬರ್ 1990ರಿಂದ 1-2-1991ನೇವರೆಗೆ)

ಆ) *ಈ ಪರವಾನಿಗೆಗಳಿಂದ ರಾಜ್ಯ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು?*

ಇ) *ಈ ಪರವಾನಿಗೆಗಳನ್ನು ಕೊಡುವಾಗ ಸರ್ಕಾರದವರು ಅನುಸರಿಸುವ ನೀತಿ ನಿಯಮಗಳೇನು?*

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :

ಅ) ಯಾವುದೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ಸರಬರಾಜು

1026 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ಸರಬರಾಜನ್ನು ನಿರ್ದಿಷ್ಟ ಕಾಲಗಳಲ್ಲಿ ಮಾಡುವುದಾಗಿ ನಿಯಮ ರಚಿಸಿದ್ದರೂ ಅದನ್ನು ಸಮರ್ಪಕವಾಗಿ ಆಚರಣೆಗೆ ತರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಗ್ರಾಮಾಂತರ ಪ್ರದೇಶಕ್ಕೆ ವಿದ್ಯುತ್ ಸರಬರಾಜು ಮಾಡುವ ಅವಧಿಯಲ್ಲಿ ಅನೇಕ ಸಾರಿ ವಿದ್ಯುತ್ ನಿಲುಗಡೆ ಮಾಡಿ ಕೈಗಾರಿಕೆಗಳ ಪೂರೈಕೆಗೆ ಅನುಕೂಲ ಮಾಡಿಕೊಡಲು ಮಂಡಳಿಯ ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಗ್ರಾಮಾಂತರ ಪ್ರದೇಶದ ಪೂರೈಕೆಯಲ್ಲಿ ಮಧ್ಯೆ ಮಧ್ಯೆ ನಿಲುಗಡೆ ಆಗುವುದರಿಂದ ರೈತರಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಗ್ರಾಮಾಂತರ ಪ್ರದೇಶಗಳಿಗೆ ನಿರ್ದಿಷ್ಟ ಸಮಯದಲ್ಲಿ ವಿದ್ಯುತ್ ಸರಬರಾಜನ್ನು ನೀಡಲು ಮಂಡಳಿಯು ಶ್ರಮಿಸುತ್ತಿದೆ.

ಆ) ಮಂಡಳಿಯು ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ ಆರು ಗಂಟೆಗಳ ಕಾಲ ನಿರ್ವಹಿಸುತ್ತಿರುವ ನಿಯಮಿತ ಲೋಡ್ ಷೆಡ್ಡಿಂಗ್‌ನಿಂದ ಶೇಕಡ 60ಕ್ಕೂ ಹೆಚ್ಚಿಗೆ ಕೈಗಾರಿಕೆಗಳ ಲೋಡ್ ಇರುವ ಫೀಡರುಗಳನ್ನು ವಿನಾಯ್ತಿ ಗೊಳಿಸಿದೆ. ಆದ್ದರಿಂದ ಮಂಡಳಿಯ ಅಧಿಕಾರಿಗಳು ಕೈಗಾರಿಕೆಗಳ ವಿದ್ಯುತ್ ಪೂರೈಕೆಗೆ ಅನುಕೂಲ ಮಾಡಿಕೊಡುವ ವಿಷಯದಲ್ಲಿ ಶಾಮೀಲಾಗಿರುವ ಪ್ರಶ್ನೆ ಉದ್ಭವಿಸುವುದಿಲ್ಲ.